ಹೆಚ್ಚಿನ ಮಾಹಿತಿ ಏನಾದರೂ ಸಿಕ್ಕರೆ ಖಂಡಿತವಾಗಿ ಈ ಮನೆಯಲ್ಲಿ ತಮ್ಮ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ..

ಶ್ರೀ ಸಿದ್ದರಾಮಯ್ಯ : ಇವರ ಹೇಳಿಕೆಯಲ್ಲಿ ಯಾರೋ ಇಬ್ಬರು ಬಂದಿದ್ದರು ಅವರು ಫೈರ್ ಮಾಡಿದರು ಎಂದು ಹೇಳುತ್ತಾರೆ. ಅದಕ್ಕೇನೂ ಇದರಲ್ಲಿ ಮಾಹಿತಿ ಇಲ್ಲ. ಫೈರ್ ಮಾಡದೆ ಇವರ ಸಿ.ಐ.ಎಸ್.ಎಫ್.ನ ಭಗವಾನ್ ಎನ್ನುವವರು 8 ಬುಲೆಟ್‌ಗಳನ್ನು ಫೈರ್ ಮಾಡಿದ್ದಾನೆ. ಅಲ್ಲಿ ಒಬ್ಬರು ಸಬ್‌ಇನ್ಸ್‌ಪೆಕ್ಟರ್ ಲೆವಲ್ ಆಫೀಸರ್ ಇದ್ದಾರೆ. ಹೆಡ್‌ಕಾನ್ಸ್ ಟೇಬಲ್ ಇದ್ದಾರೆ. ಸುತ್ತ 6 ಅಡಿ ಎತ್ತರದ ಕಾಂಪೌಂಡ್ ಇದೆ. ಎಲ್ಲಾ ಇದ್ದರೂ ಕೂಡ ಇಬ್ಬರು ಎಲ್ಲಿಂದ ಒಳಗಡೆ ಬಂದರು? ಅವರು ಯಾರು ಎಂದು ಗೊತ್ತಿಲ್ಲ. ಅವರು ಅಪರಿಚಿತರು. ಅವರು ಗುಂಡು ಹಾರಿಸಿದ್ದಾರೆ. ಅವರು ಗುಂಡು ಹಾರಿಸಿದ್ದಕ್ಕೆ ಪ್ರತಿಯಾಗಿ ಇವನು ಗುಂಡು ಹಾರಿಸಿದ ಎಂದು ಹೇಳುತ್ತಾರೆ. ಆದರೆ ಅಲ್ಲಿ ಹೋಗಿ ನೋಡಿದರೆ ಸಿ.ಐ.ಎಸ್. ಎಫ್.ನ ಭಗವಾನ್ ಹಾರಿಸಿದ ಗುಂಡುಗಳು ಬಿಟ್ಟರೆ, ಅವರು ಹಾರಿಸಿದ ಗುಂಡು ಏನೂ ಸಿಕ್ಕಿಲ್ಲ. ಈ ಭಗವಾನ್ ಏನಾದರೂ ಸುಳ್ಳು ಹೇಳುತ್ತಾನಾ ಅಥವಾ ಇನ್ನೇನಾದರೂ ಕಾರಣಗಳು ಇವೆಯೇ? ಇದರ ಬಗ್ಗೆ ಕೂಲಂಕಷವಾಗಿ ತನಿಖೆ ಮಾಡುವುದು ಒಳ್ಳೆಯದು. ಇದನ್ನು ತನಿಖೆ ಮಾಡಿ ವರದಿ ಮಾಡಬೇಕು. ಏಕೆಂದರೆ ಇದು ಬಹಳ ಸೂಕ್ಷ್ಮವಾದಂಥ ಪ್ರದೇಶ ಆಗಿರುವುದರಿಂದ ಅಲ್ಲಿ 24 ಗಂಟೆ ಭದ್ರತೆಯ ವ್ಯವಸ್ಥೆಯನ್ನು ಮಾಡಿರತಕ್ಕಂಥದ್ದು. Is there only failure on the part of security? ಅಥವಾ ಇವನೇನಾದರೂ ಸುಳ್ಳು ಹೇಳುತ್ತಾನೆಯೆ? ಇದನ್ನು ಕೂಲಂಕಷವಾಗಿ ತನಿಖೆ ಮಾಡಬೇಕು, ಇದನ್ನು ನೆಗ್ಲೆಕ್ಟ್ ಮಾಡಬಾರದೆಂದು ನಾನು ಒತ್ತಾಯವನ್ನು ಮಾಡುತ್ತೇನೆ.

ಈ) ವಿಷಯ : ಪ್ರಥಮ ದರ್ಜೆ ಕಾಲೇಜು ಕಟ್ಟಡದ ಬಗ್ಗೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ (ಬೇಲೂರು) : ನನ್ನ ಕ್ಷೇತ್ರದ ಆಲೂರು ತಾಲ್ಲೂಕು ಕೇಂದ್ರದಲ್ಲಿ ಪ್ರಥಮ ದರ್ಜೆ ಕಾಲೇಜು ಇದ್ದು ಅಲ್ಲಿ ಸುಮಾರು 310 ವಿದ್ಯಾರ್ಥಿ ವಿದ್ಯಾರ್ಥಿನಿಯರು ಸೇರ್ಪಡೆಯಾಗಿದ್ದಾರೆ. ಆದರೆ ಕಾಲೇಜಿಗೆ ಸುಸಜ್ಜಿತವಾದ ಕಟ್ಟಡ ಇಲ್ಲದೆ ತರಗತಿ ನಡೆಯುವುದಕ್ಕೆ ತೊಂದರೆಯಾಗಿದೆ. ಪ್ರಯೋಗ ಶಾಲೆ ಆಗಿರಬಹುದು ಮತ್ತೊಂದು ಆಗಿರಬಹುದು ಅದಕ್ಕೆ ತೊಂದರೆಯಾಗಿದೆ. ಈಗ ನಡೆಯುತ್ತಿರತಕ್ಕಂಥ ಕಾಲೇಜು ನಮ್ಮ ಸರ್ಕಾರದ

Middle School ಕಟ್ಟಡದಲ್ಲಿ ನಡೆಯುತ್ತಿದೆ. ಸಣ್ಣ ಪುಟ್ಟ ಬೇರೆ ಬೇರೆ ಕಟ್ಟಡಗಳಲ್ಲಿ ನಡೆಸುತ್ತಿದ್ದೇವೆ. ಆದ್ದರಿಂದ ಕಟ್ಟಡದ ಸಲುವಾಗಿ ತುಂಬಾ ತೊಂದರೆಯಾಗಿದೆ. ಸರ್ಕಾರ ಕೂಡಲೆ ಪ್ರಥಮ ದರ್ಜೆ ಕಾಲೇಜಿಗೆ ಕಟ್ಟಡವನ್ನು ಮಂಜೂರು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಪೌರಾಡಳಿತ ಸಚಿವರು) (ಶಿಕ್ಷಣ ಸಚಿವರ ಪರವಾಗಿ) : ಮಾನ್ಯ ಶಾಸಕರಾದ ಹೆಚ್.ಕೆ.ಕುಮಾರಸ್ವಾಮಿಯವರು ಅವರ ಕ್ಷೇತ್ರದ ಹಾಸನ ಜಿಲ್ಲೆ ಆಲೂರು ತಾಲ್ಲೂಕಿನಲ್ಲಿ ಒಂದು ಪ್ರಥಮ ದರ್ಜೆ ಕಾಲೇಜು ಇರುವುದಾಗಿಯೂ 310 ಜನ ವಿದ್ಯಾರ್ಥಿಗಳು ವಿಧ್ಯಾಭ್ಯಾಸ ಮಾಡುತ್ತಿದ್ದಾರೆಂದು, ಸ್ವಂತ ಕಟ್ಟಡವಿಲ್ಲದೆ ಪಾಠ ಪ್ರವಚನಕ್ಕೆ ತೊಂದರೆಯಾಗಿರುವುದಾಗಿಯೂ ಈಗಾಗಲೇ 300 ಲಕ್ಷ ರೂ. ಗಳ ಅಂದಾಜಿನ ಕಾಮಗಾರಿಯ ಪ್ರಸ್ತಾಪವಿದ್ದು ಇನ್ನು ಮಂಜೂರಾತಿಯಾಗಿಲ್ಲವೆಂದು ತಿಳಿಸಿರುತ್ತಾರೆ. ಯಾವುದೇ ಪ್ರಥಮ ದರ್ಜೆ ಕಾಲೇಜಿಗೆ 300 ಲಕ್ಷ ರೂ.ಗಳಲ್ಲಿ ಕಟ್ಟಡ ಕಟ್ಟುವ ಪ್ರಸ್ತಾಪ ಸರ್ಕಾರದ ಮುಂದೆ ಇಲ್ಲ. ಒಂದು ಪ್ರಥಮ ದರ್ಜೆ ಕಾಲೇಜಿಗೆ 121 ಲಕ್ಷ ರೂ.ಗಳ ಅಂದಾಜಿನ ಕಾಮಗಾರಿಗಳನ್ನು ಮಂಜೂರಿಸಬಹುದಾಗಿದೆ. ಮಾನ್ಯ ಶಾಸಕರು ಪ್ರಸ್ತಾಪಿಸಿರುವ ವಿಷಯ ಕುರಿತಂತೆ ತುರ್ತಾಗಿ ಪರಿಶೀಲಿಸಲಾಗುವುದು. ಈಗಾಗಲೇ ಆಲೂರು ತಾಲ್ಲೂಕಿನ ಪ್ರಥಮ ದರ್ಜೆ ಕಾಲೇಜಿಗೆ 24; ಲಕ್ಷ ರೂ.ಗಳ ಅನುದಾನವನ್ನು ಕೊಡಲ್ಪಟ್ಟಿದ್ದು ಕಟ್ಟಡದ ಮೂರು ಕೊಠಡಿಗಳ ಕಾಮಗಾರಿ ಪೂರ್ಣಗೊಂಡಿದೆ. ಇನ್ನುಳಿದಂತೆ 2010–11 ನೇ ಸಾಲಿನಲ್ಲಿ ಅವಶ್ಯಕತೆಗೆ ಅನುಗುಣವಾಗಿ ಮತ್ತು ಅನುದಾನದ ಲಭ್ಯತೆಯನ್ನು ಆಧರಿಸಿ ಉಳಿದ ಕಾಮಗಾರಿಗಳನ್ನು ಕಟ್ಟಡದ ವಿಸ್ತರಣೆ ಎಂದು ತೆಗೆದು ಕೊಳ್ಳಲು ಪರಿಶೀಲಿಸಲಾಗುವುದು.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : 24 ಲಕ್ಷ ರೂ.ಗಳಲ್ಲಿ ಕಟ್ಟಡ ಕಟ್ಟಲಾಗಿದೆ. ಆದರೆ ಒಂದೇ ಒಂದು ಶಾಲಾ ಕೊಠಡಿ ಇರತಕ್ಕಂಥದ್ದು. ಉಳಿದದ್ದು ಕಛೇರಿಗೆ ಉಪಯೋಗಿಸಿಕೊಳ್ಳುತ್ತಾರೆ. ತುಂಬಾ ತೊಂದರೆ ಇರುವುದರಿಂದ ಈ ವರ್ಷದ ಅನುದಾನದಲ್ಲಿ ದಯಮಾಡಿ ಮಂಜೂರು ಮಾಡಬೇಕು.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, 2010–11 ನೇ ಸಾಲಿನಲ್ಲಿ ಇದನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಆಯಿತು. ಈಗ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಅರ್ಧ ಗಂಟೆ ಚರ್ಚೆ ಎಂದು ಹೇಳಿದ್ದೆ. ಡಾ: ಸುಧಾಕರ್‌ವರು ಮಾತನಾಡಿ.

5. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ :

ವಿಷಯ : ಪ್ರಸ್ತುತ ಬೇಸಿಗೆ ಕಾಲ ಪ್ರಾರಂಭವಾಗಿದ್ದು ರಾಜ್ಯಾದ್ಯಂತ ಭೀಕರವಾಗಿರುವ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ.

ಡಾ: ಎಂ.ಸಿ.ಸುಧಾಕರ್ (ಚಿಂತಾಮಣಿ) : ಮಾನ್ಯ ಅಧ್ಯಕ್ಷರೆ, ನಿಯಮ 69ರ ಮೇರೆಗೆ ರಾಜ್ಯದಲ್ಲಿ ಇರತಕ್ಕಂಥ ಹಲವಾರು ಜಿಲ್ಲೆಗಳಲ್ಲಿ ಅತಿವೃಷ್ಟಿ ಮತ್ತು ಅನಾವೃಷ್ಟಿ ಆಗಿರತಕ್ಕಂಥದ್ದು, ಈಗಾಗಲೇ ಬೇಸಿಗೆ ಪ್ರಾರಂಭವಾಗಿದ್ದು ಬಹಳ ಕ್ಷೇತ್ರಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣವಾಗಿದ್ದು ಬಹಳ ದೊಡ್ಡ ಸಮಸ್ಯೆಯಾಗಿ ಆ ಭಾಗದ ಜನಪ್ರತಿನಿಧಿಗಳಾದ ನಮಗೆ ದೊಡ್ಡ ತಲೆನೋವಾಗಿರುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಮುಖ್ಯವಾಗಿ ನಮ್ಮ ಬಯಲು ಸೀಮೆ ಭಾಗದ ನಮ್ಮ ಸಮಸ್ಯೆಗಳನ್ನು ತಮ್ಮ ಮುಖಾಂತರ ಸರ್ಕಾರಕ್ಕೆ ತಿಳಿಸುತ್ತಾ ಬೇರೆ ಕ್ಷೇತ್ರಗಳಲ್ಲಿಯೂ ಇದೇ ರೀತಿಯಾದಂಥ ಸಮಸ್ಯೆಗಳು ಇರತಕ್ಕಂಥದ್ದನ್ನು ಎಲ್ಲಾ ಸದಸ್ಯರು ಭಾಗವಹಿಸುವುದಕ್ಕೆ ತಾವು ಅವಕಾಶವನ್ನು ಕೊಟ್ಟಿರುವುದಕ್ಕೆ ತಮಗೆ ನಾನು ಧನ್ಯವಾದಗಳನ್ನು ತಿಳಿಸುತ್ತೇನೆ. ನಮ್ಮ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಒಟ್ಟು ಸರಾಸರಿ 450l ಮಿ.ಮೀಟರ್ ವಾಡಿಕೆ ಮಳೆ ಆಗಬೇಕಾಗಿತ್ತು. ಅಂತಹ ಒಂದು ಸಂದರ್ಭದಲ್ಲಿ ಕೇವಲ 3800 ಮಿ.ಮೀಟರ್ ಕಳೆದ ವರ್ಷ ಮಳೆ ಆಗಿರುವಂಥದ್ದಾಗಿದೆ. ಅದು ಕೆಲವು ಭಾಗಗಳಲ್ಲಿ ಮಾತ್ರ ಸಾಧಾರಣ ಮಳೆ ಆಗಿದ್ದು, ಇನ್ನು ಕೆಲವು ಭಾಗಗಳಲ್ಲಿ ಮಳೆ ಆಗಿಲ್ಲದೇ ಇರತಕ್ಕಂಥದ್ದು ನಾವು ಕಂಡಿದ್ದೇವೆ. ಅತಿ ಹೆಚ್ಚು ಕೆರೆಗಳು ಇರತಕ್ಕಂಥದ್ದು ಹಳೇ ಕೋಲಾರ ಜಿಲ್ಲೆ. ಸುಮಾರು 4000 ಕ್ಕಿಂತ ಹೆಚ್ಚು ಕೆರೆಗಳು ಇರತಕ್ಕಂಥದ್ದು ನಮ್ಮ ಭಾಗದಲ್ಲಿ. ಅಂಥ ಪರಿಸ್ಥಿತಿಯಲ್ಲಿ ಕೇವಲ ಒಂದೆರಡು ಭಾಗದಲ್ಲಿ ಮಾತ್ರ ಅಲ್ಪಸ್ವಲ್ಪ ಮಳೆ ಆಗಿರುವಂಥದ್ದು ಮತ್ತು ಆ ಕೆರೆಗಳಿಗೆ ನೀರು ಬಂದಿರತಕ್ಕಂಥದ್ದನ್ನು ನಾವು ನೋಡಿರುತ್ತೇವೆ.

ಎಲ್ಲೆಲ್ಲಿ ಕೆರೆಗಳಿಗೆ ನೀರು ಬಂದಿದೆ ಅಲ್ಲಿ ಅಂತರ್ಜಲ ಸ್ವಲ್ಪ ವೃದ್ಧಿಯಾಗಿರುವುದು, ಅಲ್ಲಿ ಬೋರ್‌ವೆಲ್ ಆಧಾರಿತವಾಗಿ ಅಂದರೆ